**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.</u>**

**C.C. - 1634-22** **ಪಿಡಬ್ಲ್ಯೂ ಃ** **<u>14</u>**

**ಸಿಡಬ್ಲ್ಯೂ ಃ** **<u>20</u>**

ಸಾಕ್ಷಿದಾರರ ಹೆಸರು ಃ ಬಸವರಾಜ ದಾಸಕೋನವರ

ತಂದೆ ಹೆಸರು ಃ ಮಹಾದೇವಪ್ಪ

ವಯಸ್ಸು ಃ 52 ವರ್ಷ

ಉದ್ಯೋಗ ಃ ಎ ಎಸ್ ಐ

ವಾಸಸ್ಥಳ ಃ ಉತ್ತರ ಸಂಚಾರಿ ಪೋಲಿಸ ಠಾಣೆ, ಹುಬ್ಬಳ್ಳಿ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 12.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು ಪೂರ್ವ ಸಂಚಾರಿ ಪೋಲಿಸ ಠಾಣೆ ಯಲ್ಲಿ 2021 ರಿಂದ 2022 ವರೆಗೆ ಎ ಎಸ್ ಐ ಅಂತಾ ಸೇವೆ ಸಲ್ಲಿಸಿದ್ದೇನೆ.

ದಿಃ 23.02.2022 ರಂದು ಮಾನ್ಯ ಪೋಲಿಸ ಇನ್ಸಪೆಕ್ಟರವರು ನನಗೆ ಜ್ಞಾಪನಾ ಪತ್ರ ನೀಡಿದ್ದು, ಸದರಿ ಜ್ಞಾಪನಾ ಪತ್ರದಲ್ಲಿ ದಿಃ 22.2.2022 ರಲ್ಲಿ ಸರ್ವೋದಯ ಸರ್ಕಲ್ ಬಳಿ ಒಂದು ಬೈಕಿಗೆ ಹಿಂಬದಿಯಿಂದ ಒಂದು ಚವರಲೆಟ್ ಕಾರ್ ಅಪಘಾತ ಪಡಿಸಿ ಬೈಕಿನ ಮೇಲೆ ಹಿಂದುಗಡೆಗೆ ಕುಳಿತ ಮಹಿಳೆಗೆ ಗಾಯ ಹೊಂದಿದ್ದು, ಈ ಕುರಿತು ವಾಹನ ಹಾಗೂ ಚಾಲಕನನ್ನು ಹಾಜರಪಡಿಸುವಂತೆ ನೀಡಿದ್ದು, ಆ ಪ್ರಕಾರ ನಾನು, ಎಸ್ ವಿ ಧಾರವಾಡ ರವರು ಕೂಡಿಕೊಂಡು ಕುಸುಗಲ್ ರೋಡನ ಬ್ಯಾಹಟ್ಟಿಕಡೆಗೆ ಹೋದಾಗ ತಿರ್ಲಾಪೂರ ಬಳಿ ಒಂದು ಕಾರ್ ನಿಂತಿದ್ದು, ಅದು ಚವರಲೆಟ್ ಬೀಟ್ ಗ್ರೇ ಕಾರ್ ಆಗಿದ್ದು, ಸದರಿ ಕಾರ ನಂಃ ಕೆಎ-25 ಜಡ್ 8317 ಆಗಿದ್ದು, ಅಪಘಾತ ದಲ್ಲಿ ಭಾಗಿಯಾದ ಬಗ್ಗೆ ಖಚಿತಪಡಿಸಿಕೊಂಡು ಅದನ್ನು ತೆಗೆದುಕೊಂಡು, ಠಾಣೆಗೆ ತಂದಿದ್ದೇವೆ. ನಂತರ ಆರೋಪಿಯನ್ನು ಪತ್ತೆ ಹಚ್ಚಲಾಗಿ ದಿಃ 24.2.2024 ರಂದು ಆರೋಪಿತನಿಗೆ ಪತ್ತೆ ಮಾಡುವ ಕುರಿತು ಹೇಮಂತನಗರ, ಕುಸುಗಲ್ ರೋಡ, ನೇಹರು ಕಾಲನಿ ಮೂಲಕ ರೇಲ್ವೆ ನಿಲ್ದಾಣ ಕಡೆಗೆ ಹೋದಾಗ ಅಲ್ಲೊಬ್ಬರು ನಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನ ಮಾಡಿದಾಗ ಆತನನ್ನು ವಿಚಾರಿಸಿದಾಗ ನನ್ನ ಹೆಸರು ರಾಜೇಶ ತಂದೆಃ ಮಿನಿರೈತನಮ್ ಅಂತಾ ಹೇಳಿದ್ದು, ನಾನೇ ಅಪಘಾತ ಪಡಿಸಿದ್ದು ಅಂತಾ ಹೇಳಿದನು.

ಆತನನ್ನು ಠಾಣೆಗೆ ಕರೆದುಕೊಂಡು ಬಂದು ಹಾಜರಪಡಿಸಿರುತ್ತೇನೆ. ಈ ಬಗ್ಗೆ ವರದಿ ನೀಡಿದ್ದೇನೆ. ಸದರಿ ಜ್ಞಾಪನಾ ಪತ್ರವನ್ನು ನಿಪಿ.44 ಎಂದು ಗುರುತಿಸಲಾಯಿತು. ಹೇಳಿಕೆ ವರದಿಯನ್ನು ನಿಪಿ.45 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿ ನಿಪಿ.45-ಎ ಎಂದು ಗುರುತಿಸಲಾಯಿತು. ಸಾಕ್ಷಿ ಆರೋಪಿ ನೋಡಿ ಗುರುತಿಸಿರುತ್ತಾರೆ.

**ಆರೋಪಿ ಪರ ವಕೀಲರು ಗೈರು ಹಾಜರಾಗಿರುವುದರಿಂದ ಪಾಟಿ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.